ಅಮ್ಮ ಹೇಳುವುದೂ ಅದನ್ನೇ. 'ಎಲ್ಲರೂ ಕೇಳುತ್ತಾರೆ. ನನಗೆ ಇಲ್ಲಿ ಹಿಂಸೆಯಾಗುತ್ತದೆ.' ಹಾಗಾದರೆ ಆ 'ಎಲ್ಲರಿಗೆ' ಬೇರೆ ಕೆಲಸವೇ ಇಲ್ಲವೇ?' ಎಂದು ಅಮ್ಮನೊಡನೆ ಕೇಳಿದರೆ ಅಮ್ಮನಿಗೆ ಅದು ಇಷ್ಟವಾಗುವುದಿಲ್ಲ.

ಅವಳ ಅಪ್ಪನಿಗಾದರೆ ತಕ್ಕ ಮಟ್ಟಿಗೆ ಅರ್ಥವಾಗುತ್ತಿತ್ತು. ಅಥವಾ ಹಾಗೆಂಬುದು ಅವಳ ಎಣಿಕೆಯಾಗಿತ್ತು. ಅಮ್ಮ–ಮಗಳ ವಾಗ್ಯುದ್ಧ ನಡೆಯುವಾಗೆಲ್ಲ ಅವಳ ತಂದೆ ಪವನಳ ಪರವಾಗಿಯೇ ಮಾತಾಡುತ್ತಿದ್ದುದು ಹೌದು. ಆದರೆ, ಅವಳ ತಂದೆಯ ಸ್ವಭಾವವೇ ಹಾಗೆ. ಅಮ್ಮ ಏನೇ ಹೇಳಲಿ ಅದರ ವಿರುದ್ಧವಾಗಿ ಮಾತಾಡುವುದರಲ್ಲಿ ಆತನಿಗೊಂದು ಮೋಜು. ಈ ಮೋಜೆಂಬುದು ಕಾಲ ಕಳೆಯುತ್ತ ಒಂದು ಹಟವಾಗಿಯೇ ಪರಿಣಮಿಸಿತ್ತು ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು.

ಊರಿಗೆ ಹೋಗಿ ಮುಟ್ಟುವಾಗ ಮಧ್ಯಾಹ್ನವಾಗಿತ್ತು. ಹತ್ತು ಗಂಟೆಯ ವಿಮಾನಕ್ಕಾಗಿ ಬೆಳಗ್ಗೆ ಏಳು ಗಂಟೆಗೆ ಮನೆಬಿಟ್ಟಿದ್ದಳು. ನಿಲ್ದಾಣದಿಂದ ಮತ್ತೆ ಗಂಟೆಯ ಪಯಣ. ಅವಳಿಗೆ ಸುಸ್ತಾಗಿದ್ದರೂ, ಸ್ನಾನ–ಊಟ ಮುಗಿಸಿ ಶಮಾಳ ಮನೆಗೆ ಹೊರಟಳು.

ಶಮಾಳ ಅಮ್ಮ, 'ಶಮಾಂದು ಆಯ್ತು ನೋಡು, ನಿಂದೂ ಹಾಗೇ ಆದರೆ ಒಳ್ಳೆಯದು. ಸೊ, ನೆಕ್ಸ್ಟ್ ಇಸ್ ಯುವರ್ಸ್.' ಎಂದು ತನ್ನನ್ನು ಖುಷಿಪಡಿಸಲಿಕ್ಕೆಂಬಂತೆ ಹೇಳಿದಳು. ಹಾಗೆಲ್ಲ ಹೇಳುವ ಅವಶ್ಯಕತೆಯಿಲ್ಲ ಎನ್ನಲೇ ಎಂದುಕೊಂಡಳು. ಅಷ್ಟರಲ್ಲಿ ಓಡೋಡಿ ಬಂದ ಶಮಾ ಅವಳ ಕೈ ಹಿಡಿದು ಎಳೆದುಕೊಂಡೇ ಎಂಬಂತೆ ಒಳಗಿನ ಕೋಣೆಗೆ ಕರೆದುಕೊಂಡು ಹೋದಳು.

ಬಹಳ ದಿನಗಳ ಮೇಲೆ ಭೇಟಿಯಾದ ಗೆಳತಿಯರ ನಡುವೆ ಮಾತನಾಡಲು ಮಣದಷ್ಟಿತ್ತು. ಸಂತೋಷವೆಂಬುದು ಶಮಾಳ ಮಾತು, ನಡೆ, ಹಾವಭಾವ ಪ್ರತಿಯೊಂದರಲ್ಲೂ ವ್ಯಕ್ತವಾಗುತ್ತಿದ್ದುದನ್ನು ಪವನ ಗಮನಿಸಿದಳು. ಏನೇ ಆಗಲಿ ಗೆಳತಿ ಖುಷಿಯಲ್ಲಿದ್ದಾಳೆ, ಒತ್ತಾಯಕ್ಕೋ, ಉಪಾಯವಿಲ್ಲದೆಯೋ ಒಪ್ಪಿಕೊಂಡ ಮದುವೆಯಲ್ಲ ಎಂದು ಅವಳಿಗೆ ಸಮಾಧಾನವೆನಿಸಿತು. 'ಹೈದರಾಬಾದಿನಲ್ಲಿದ್ದಾಗಲೇ ಅವನ ಪರಿಚಯ. ನಿನಗೂ ಹೇಳಿದ್ದೆನಲ್ಲ. ಬೆಂಗಳೂರಿಗೆ ಬಂದ ಮೇಲೆ ಸಂಪರ್ಕ ತಪ್ಪಿತ್ತು. ಅವನಿಗೆ ವಿಚ್ಛೇದನ ಆಗ್ತ ಉಂಟು ಅಂತ ದೂರದ ಸುದ್ದಿ ಸಿಕ್ಕಿತ್ತು, ಅಷ್ಟೆ.' ಇಷ್ಟು ಸಮಯದ ಮೇಲೆ, ನಾಲ್ಕೈದು ವರ್ಷಗಳ ಅಂತರದಲ್ಲಿ ಪುನಃ ಭೇಟಿಯಾದಾಗ ಅವರ ಗೆಳೆತನ ಸರಾಗವಾಗಿ ಮುಂದುವರಿಯಿತಂತೆ. 'ಫ್ರ್ಯಾಂಕಾಗಿ ಹೇಳಬೇಕೆ... ನಾನಾದ್ರು ಅಷ್ಟೇ, ನಿಂಗಾದ್ರೂ, ನಮ್ಮ ಕೆಲಸದಲ್ಲಿ ಎಷ್ಟು ಮುಳುಗಿರುತ್ತೇವೆಂದ್ರೆ, ರಾಜಕುಮಾರನ್ನ ಹುಡುಕಲಿಕ್ಕೆ ನಮಗೆಲ್ಲಿ ಪುರುಸೊತ್ತು, ಅಲ್ವ?'

ಕಪಾಟಿನಿಂದ ಮದುವೆಯ ಸೀರೆಗಳನ್ನು ಒಂದೊಂದಾಗಿ ತೆಗೆದು ಮಂಚದ ಮೇಲೆ ಹರಡುತ್ತ ಮಾತು ಮುಂದುವರಿಸಿದಳು, 'ಆಗಾಗ್ಗೆ ಭೇಟಿಯಾಗುತ್ತಿದ್ದೆವು. ಹರಟುತ್ತಿದ್ದೆವು. ಒಂಥರ ಖುಷಿ... ಯಾವ ಒತ್ತಡ ಇಲ್ಲದೆ ನಾನು ನಾನಾಗಿಯೇ ಇರುವ ಸುಖ...' ಅವನ ವಿನಯ, ಹೆಣ್ಮಕ್ಕಳ ಬಗೆಗಿದ್ದ ಆದರ, ಅವಳ 'ಆಪತ್ಕಾಲ' ಎನ್ನುವಂತಹ ಸನ್ನಿವೇಶಗಳಲ್ಲಿ ಯಾವುದೇ ತೋರಿಕೆಯಿಲ್ಲದೆ ಮಾಡಿದ ಸಹಾಯ, ಆಫೀಸಿನಲ್ಲಿ ಅವನ ಬಗೆಗಿದ್ದ ಗೌರವ... ಅವಳು ಹೇಳುತ್ತಿದ್ದಂತೆ ಪವನಳ ಮನಸ್ಸಿನಲ್ಲಿ ಸಂದೇಶನೊಂದಿಗೆ ತನಗಾದ ಅನುಭವಗಳು ಸಮಾನಾಂತರವಾಗಿ ಹಾದುಹೋಗುತ್ತಿದ್ದವು. ಒಂದೆರಡು ಬಾರಿ, 'ಸಂದೇಶನೂ ಹಾಗೆಯೇ, ಒಮ್ಮೆ...' ಎಂದು ಏನೋ ಹೇಳಲು ಹೊರಟು, ಶಮಾಳ ಉಮೇದಿನ ಮಾತುಗಳನ್ನು ಕಡಿಯುವುದು ಉಚಿತವಲ್ಲವೆಂದು ಅಲ್ಲಿಗೇ ಬಾಯಿಕಟ್ಟಿಕೊಂಡಳು. ಶಮಾಳ ಮಾತಿನ ಸರಣಿ ನಿಂತಂತಾದಾಗ, 'ಏನು ನಿನ್ನ ಪ್ರಿಯಕರನ ಗುಣಗಾನ ಮುಗಿಯಿತೇ?' ಎಂದು ಕುಶಾಲು ಮಾಡಿದಳು.

'ಅವನು ಸಿಕ್ಕಿದ ಅಂದರೆ ಒಂದು ತರ ಸಾಂತ್ವನದ ಭಾವ. ಅದನ್ನು ಹೀಗೇ ಅಂತ ಹೇಳಲಿಕ್ಕೆ ಕಷ್ಟ.'